


ನನ್ನ ಮನಸಿನ ಅಳಲು ಯಾರಿಗೂ ಕೇಳವಲ್ದ. ಎಷ್ಟ ದಿನದಿಂದಾ ನಾನು ನನ್ನ ಮನಸಿನ ಒಳಗಡಿಯ ದುಃಖಾನ ಹೇಳಿಕೊಳ್ಳಬೇಕಂತ ಎಷ್ಟೋ ಜನರನ್ನ ಬೇಡಿಕೊಂಡೆ. ಯಾರಿಗೂ ನನ್ನ ಧ್ವನಿನ ಕೇಳಲಿಲ್ಲ. ಆದ್ರ ನೀವು ಮಾತ್ರ ಇಂದ ನನ್ನ ಮಾತಿಗೆ ಕಿವಿಯಾಗಿರಿ...ಯಾಕಂದ್ರ ನಿಮ್ಮ ಬರಹ, ಕಥೆಗಳ ಜೊತಿಗೆ ಧ್ವನಿ ಇಲ್ದವರಿಗೂ ಧ್ವನಿಯಾಗಿರಿ. ನೊಂದವರ ಆರ್ತನಾದ ಕೇಳಿ ಅವರ ಅಸಹಾಯಕತೆ ನೋಡಿ ನ್ಯಾಯ ಕೊಡಿಸಿರಿ. ಆ ಕಾರಣಕನ.. ಯಾರಿಗೂ ಕೇಳದ ನನ್ನ ಮಾತ ನಿಮಗೆ ಕೇಳಿದ್ದ, ಮತ್ತ ನನ್ನ ಧ್ವನಿಗೆ ಧ್ವನಿ ಆಗಿದ್ದ. ನಿನ್ನೆ ಆದ ಘಟನಾ ನೋಡಿರಲಾ..?'

'ಹೌದು ಸರ್, ದಯವಿಟ್ಟು ಕ್ಷಮಿಸಿ...ನಿನ್ನೆ ನಡೆದ ಆ ಅಮಾನವೀಯ ಘಟನಾಕ ನನಗ ನಾಚಿಕೆ ಅನಿಸಲಿಕ್ಕ ಹತ್ತೇತಿ...ಅದಾವ ಪುಂಡ ಈ ಕಾರ್ಯ ಮಾಡ್ಯಾನೋ..ಅದಕ್ಕ ನನ್ನ ಧಿಕ್ಕಾರ ಐತಿ.'

'ನನಗಂತೂ ಮನಸಿಗೆ ಬ್ಹಾಳ ದುಃಖ ಆಗೇತಿ. ಯಾವ ತಪ್ಪಿಗಾಗಿ ಆ ಮಗಳ ಅಂಥಾ ದಾರುಣ ಸಾವಿಗೆ ಈಡಾದಳಲಾ. ಅಂಥಾ ದೊಡ್ಡ ಶಿಕ್ಷಾ ಯಾಕ ಬದುಕಿ ಬಾಳಬೇಕಾದ ಆ ಮಗಳಿಗೆ..?'

'ಖರೆ ಸರ್. ಆ ಘಟನೆಯಿಂದ ಎಂಥಾವ್ರ ಎದಿನೂ ನಡಗತೈತಿ. ನಿನ್ನೆ ಪೂರಾ ದಿನ ನನ್ನ ಮನಸು ಮರಗೈತಿ... ಯಾಕ ಇಂತಾ ಘಟನಾಗೊಳು ಜರಗಾಕತ್ಯಾವಂತ ಬ್ಹಾಳ ಯೋಚ್ನಾ ಮಾಡಿದ್ಯಾ. ಯಾವ ತಪ್ಪಿಗಾಗಿ ಹಿಂಗ ಆಗೇತ್ತಂತ ಸಂಜಿತನ ಮನಸ್ಸನ್ನ ಹುಳ ಕೊರದಂಗ ಕೊರಿತು ಸರ್..'

'ಜಗದೀಶ ನಿಮಗ ಗೊತ್ತೈತೋ ಗೊತ್ತಿಲ್ಲೋ. ನನ್ನ ಇಲ್ಲಿ ಪ್ರತಿಮೆಯಾಗಿ ಸ್ಥಾಪಿಸಿದ ಮ್ಯಾಲೆ ಬ್ಹಾಳ ಸರ್ತಿ ಇಲ್ಲಿ ಇಂತಾ ಹೇಯ ಘಟನಾ ಜರುಗ್ಯಾವ. ಜೊತಿಗೆ ನನ್ನ ಪ್ರತಿಮೆಯನ್ನು ಭಗ್ನಗೊಳಿಸೂ ಕೆಲಸಾನೂ ನಡೆದಾವ. ಅದಕ್ಕಿಂತ ಹೆಚ್ಚಾಗಿ ಆ ಕಾರಣದಿಂದನ ಎಷ್ಟೋ ಅಮಾಯಕರ ಪ್ರಾಣ ಹೋಗ್ಯಾವ, ಗಾಯಗೊಂಡಿದ್ದು ಆಗೇತಿ. ಇದ ನನ್ನನ್ನ ವಿಹ್ವಲಗೊಳ್ಳುವಂಗ ಮಾಡೇತಿ..'

'ಹೌದು ಸರ್, ಒಪ್ಪಕೋ ಮಾತ ಇದ. ಇಂತಾ ಘಟನಾ ಆಗದಂಗ ಜರೂರ ಕ್ರಮ ಆಗಬೇಕು. ಜೊತಿಗೆ ಘಟನಾಕ ಕಾರಣ ಆದವ್ರಿಗೆ ಉಗ್ರ ಶಿಕ್ಷೆಯಾಗಬೇಕ..ಅಂದಾಗಷ್ಟೆ ಇಂತಾ ಘಟನಾಗೊಳಿಗೆ ತಡೆ ಬೀಳ್ತಾವ.'

'ಏನ ಮಾಡೋದು, ಬ್ಯಾಡಾಂದ್ರೂ ಇಂತಾವು ಆಗಾಗ ಜರುಗತಾವ. ಆದ್ರ ನನ್ನ ಮನಸ್ಸಿನ ಖೇದ ಅಂದ್ರ